ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.: 825/2022</u>

.....................................................................

CW 07
PW 06

ಹೆಸರು : ಯಲ್ಲಾರಿ ಲೊಂಡಿ
ತಂದೆಯ ಹೆಸರು : ನಾರಾಯಣ
ವಯಸ್ಸು : 68 ವರ್ಷ
ಉದ್ಯೋಗ : ಕೃಷಿ
ವಾಸಸ್ಥಳ : ಬಿ.ಕೆ.ಹಳ್ಳಿ

ದಿನಾಂಕ 29-04-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 1 ಮಗ. ಚಾಸಾ 3 ರಿಂದ 5 ರವರು ತಮ್ಮಂದಿರು, ಹಾಗೂ ಚಾಸಾ 4 ಮತ್ತು 6 ರವರು ಚಿಕ್ಕಪ್ಪಂದಿರು. ಆರೋಪಿ ನನ್ನ ತಮ್ಮ. ಚಾಸಾ 2 ರವರು ಪರಿಚಯವಿದ್ದಾರೆ.

ನಾವು ಮತ್ತು ಆರೋಪಿ ಅನ್ಯೋನ್ಯವಾಗಿ ಇದ್ದೇವೆ, ಆರೋಪಿತನು ನನಗೆ ಸರ್ವೇ ನಂಬರ 260 ರಲ್ಲಿ ಪಾಲು ಬೇಕು ಅಂತಾ ಜಗಳ ಮಾಡಿಲ್ಲ, ತಕರಾರು ಮಾಡಿಲ್ಲ, ನಮ್ಮ ಹೊಲದಲ್ಲಿ ಅಕ್ರಮ ಪ್ರವೇಶ ಮಾಡಿಲ್ಲ, ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಬೆದರಿಕೆ ಹಾಕಿಲ್ಲ, ಹೊಡೆದಿಲ್ಲ. ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ಈ ಮೊದಲು ನೋಡಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u> ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 10-05-2022 ರಂದು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ ದಿನಾಂಕ 09-05-2022 ರಂದು ಬೆಳಗ್ಗೆ ನನ್ನ ಮಗ ಮಾರುತಿ ------------- ನನ್ನ ಮಗನಿಂದಲೇ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಮೇರೆಗೆ ಅವರ ಹೇಳಿಕೆಯನ್ನು **ನಿಪಿ 6 ಎಂದು** ಗುರುತಿಸಲಾಯಿತು. ಆರೋಪಿತ ನಿಮ್ಮ ಊರಿನವರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ. ಹಳಿಯಾಳ